ಆಂಕಿ ಅಂಶಗಳ ಪ್ರಕಾರ ನಾವು ಮನಗಂಡಿದ್ದೇವೆ. ಮತ್ತೊಂದು ಮಾತನ್ನು ಈ ಸಮಯದಲ್ಲಿ ಹೇಳಬಯಸುತ್ತೇನೆ.ತಿಪಟೂರಿನಲ್ಲಿ ಒಂದು ಸ್ಪೇಟ್ ಮಾರ್ಕೆಟಿಂಗ್ ಫೆಡರೇಷನ್ ಮತ್ತು ಸ್ಯಾಫಲೆಡ್ರೇಷ್ನ್‌ದವರಸಂಯುಕ್ತ ಒಂದು ವೆಂಚರ್‌ದಲ್ಲಿ ಒಂದು ಬ್ರಾಂಚ್ ಕೂಡ ತೆರೆದಿದ್ದೇವೆ. ಅವರು 2,600 ರೂಪಾಯಿ ಪ್ರಕಾರ ಈಗಾಗಲೇ 150 ಕ್ವಿಂಟಲ್ ಕೊಬ್ಬರಿಯನ್ನು ಖರೀದಿಸಿದ್ದಾರೆ ಎನ್ನತಕ್ಕಂಥ ವರದಿ ಕೂಡ ನನಗೆ ಬಂದಿದೆ. ಆದ್ದರಿಂದ ಸರ್ಕಾರ ಈ ಒಂದು ಬೆಲೆ ಕುಸಿತದಿಂದ ರೈತರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳತಕ್ಕಂಥ ಒಂದು ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎನ್ನುವಂಥ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಅಲ್ಲದೆ ಅವರು ಹೇಳಿರತಕ್ಕಂಥ ಲೈನ್ಸ್, ನಲ್ಲಿಯೇ ನಾವು ನಮ್ಮ ಕ್ರಮಗಳನ್ನು ಬಿಗಿ ಮಾಡತಕ್ಕಂಥಾದ್ದಕ್ಕೆ ಎಲ್ಲಾ ಕ್ರಮ ಕೈಗೊಂಡಿದ್ದೇವೆ.

ಉಪಾಧ್ಯಕ್ಷರು :– ಈಗ ಮಾನ್ಯ ಎಂ. ವಿ. ವೆಂಕಟಪ್ಪನವರು ಆರೋಗ್ಯ ಮಂತ್ರಿಗಳ ಗಮನಪನು ಸೆಳೆಯುವುದು.

ಎಲ್. ಆರ್. ಶಿವರಾಮೇಗೌಡ : ಅಧ್ಯಕ್ಷರೆ, ಇವರ ಬಗ್ಗೆ ಕ್ಲಾರಿಫಿಕೇಷನ್ ಕೇಳಬೇಕಾಗುತ್ತದೆ.

ಉಪಾಧ್ಯಕ್ಷರು :– ತಾವು ಅವರ ಹತ್ತಿರ ಹೋಗಿ ಮಾತನಾಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ :– ಅಧ್ಯಕ್ಷರೆ, ಈಗ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ನಾವು ಅದನ್ನು ಅರ್ಥ ಮಾಡಿಕೊಳ್ಳದೇ ಹೋದರೆ ಈ ಪ್ರಶ್ನೆ ಕೇಳಿ ಏನು ಪ್ರಯೋಜನವಾಗುತ್ತದೆ ?

ಉಪಾಧ್ಯಕ್ಷರು :– ತಾವು ಅವರ ಹತ್ತಿರ ಹೋಗಿ ಮಾತನಾಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ :– ಅಧ್ಯಕ್ಷನೆ, ಒಂದೇ ಒಂದು ಕ್ಲಾರಿಫಿಕೇಷನ್. ಈಗ ತಿಪಟೂರಿನಲ್ಲಿ ಒಂದು ಬಿಗಿಯಾದ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳುತ್ತಿದ್ದಾರೆ. ಅದು ನಿಜವಾಗಿಯೂ ಒಪ್ಪತಕ್ಕಂಥ ವಿಚಾರ. ಆದರೆ ಈಗ ಏನಾಗಿದೆ ಎಂದರೆ, ಈ ಸದನದಲ್ಲಿ ಚರ್ಚೆ ಮಾಡಿ ಆದಮೇಲೆ ತಿಪಟೂರಿನಲ್ಲಿ ಬಿಗಿ ಮಾಡಿದ ಮೇಲೆ ಬೇರೆ ಕಡೆ ಅಂದರೆ ತುರುವೇಕೆರೆ, ಚಿಕ್ಕನಾಯಕನಹಳ್ಳಿ, ಅರಸೀಕೆರೆ ಭಾಗಗಳಲ್ಲಿ ವ್ಯಾಪಾರ ಮಾಡಲಿಕ್ಕೆ ಹೊರಟಿದ್ದಾರೆ. ಅಲ್ಲಿ ಇವೊತ್ತು ರೈತರನ್ನು ದರೋಡೆ ಮಾಡುತ್ತಿದ್ದಾರೆ. ಅದನ್ನು ತಪ್ಪಿಸುವುದಕ್ಕೆ ತಿಪಟೂರಿನಲ್ಲಿ ಒಂದು ಸ್ಕ್ವಾಡ್ ಇಟ್ಟು, ಯಾರು ತಪ್ಪು ಮಾಡುತ್ತಾರೆ, ಅಂತಹವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುವಂಥ ಕೆಲಸ ಸರ್ಕಾರದಿಂದ ಆಗಬೇಕು. ಆಗ ರೈತರಿಗೆ ಏನಾದರೂ ಪ್ರಯೋಜನವಾಗುತ್ತದೆ. ಇಲ್ಲದೇ ಇದ್ದರೆ ಏನೂ ಆಗುವುದಿಲ್ಲ ಎನ್ನುವ ಮಾತನ್ನು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ವಿಷಯ (2) ಮಂಡ್ಯ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಮಿದುಳು ಜ್ವರ ಹರಡಿರುವುದು.

ಶ್ರೀ ಎಂ. ವಿ. ವೆಂಕಟಪ್ಪ :– ಮಾನ್ಯ ಅಧ್ಯಕ್ಷರೆ, ಕಳೆದ 15 ದಿವಸಗಳಿಂದಲೂ ಕೋಲಾರ, ಬಳ್ಳಾರಿ, ಮಂಡ್ಯ ಜಿಲ್ಲೆಗಳಲ್ಲಿ ಮೆದುಳು ಜ್ವರ ಹರಡಿದ್ದು ಸುಮಾರು 10–15 ಮಕ್ಕಳು ತೀರಿ ಹೋಗಿದ್ದಾರೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಯವರು ಹೇಳಿಕೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ :– (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಯವರು) ಮಾನ್ಯ ಅಧ್ಯಕ್ಷರೆ,

ರಾಜ್ಯದಲ್ಲಿ ಮಿದುಳು ಜ್ವರದ ಪ್ರಕರಣಗಳು ಕೋಲಾರ, ಮಂಡ್ಯ, ಬಳ್ಳಾರಿ ಜಿಲ್ಲೆಗಳ ಈ ನಗರಗಳಲ್ಲಿ ಕಾಣಿಸಿಕೊಂಡಿದೆ. ಆಕ್ಟೋಬರ್ ಮಧ್ಯ ಭಾಗದಿಂದ ಇದುವರೆಗೆ ಎಂದರೆ 13–12–1990 ತಾರೀಖಿನವರೆಗೆ 92 ಪ್ರಕರಣಗಳು ವರದಿಯಾಗಿದ್ದು 29 ರೋಗಿಗಳು ಮರಣ ಹೊಂದಿರುತ್ತಾರೆ. ಪ್ರಕರಣಗಳ ವಿವರ ಈ ರೀತಿ ಇದೆ.

ಜಿಲ್ಲೆ	ಪ್ರಕರಣಗಳು	ಮರಣ
1. ಬಳ್ಳಾರಿ	27	11
2. ಕೋಲಾರ	38	11
3. ಮಂಡ್ಯ	27	7
ಒಟ್ಟು	92	29

ಸಾಮಾನ್ಯವಾಗಿ ಹಿಂದಿನ ಸಾಲುಗಳಲ್ಲಿ ಈ ಪ್ರಕರಣಗಳು ಆಕ್ಟೋಬರ್ ಮಧ್ಯಭಾಗದಲ್ಲಿ ಪ್ರಾರಂಭವಾಗಿ ನವೆಂಬರ್ ಡಿಸೆಂಬರ್ ತಿಂಗಳಿನಲ್ಲಿ ಕಾಣಿಸಿಕೊಂಡು ಜನವರಿ ಅಂತ್ಯದ ವೇಳೆಗೆ ಇಳಿಮುಖವಾಗುವುದು ಸರ್ವೆ ಸಾಮಾನ್ಯವಾಗಿ ಕಂಡುಬಂದಿದೆ.

ಮಂಡ್ಯ ಜಿಲ್ಲೆಯಲ್ಲಿ ಮೇ–ಜೂನ್ ಮತ್ತು ಆಕ್ಟೋಬರ್–ನವೆಂಬರ್ ತಿಂಗಳಿನಲ್ಲಿ ಪೆಚ್ಚಿನ ಪ್ರಕರಣಗಳು ವರದಿಯಾಗುವುದು ಜಿಲ್ಲೆಗೆ ಸ್ವಾಭಾವಿಕವಾಗಿರುತ್ತದೆ.

ರೋಗದ ಹಿನ್ನೆಲೆ : ಬೇರೆ ದೇಶಗಳಿಂದ ವಲಸೆ ಬರುವ ಪಕ್ಷಿಗಳಲ್ಲಿ ಈ ರೋಗಕ್ಕೆ ಕಾರಣವಾದ ವೈರಸ್ ರೋಗಾಣು ಕಂಡುಬರುತ್ತದೆ. ಈ ವೈರಸ್ ರೋಗಾಣು ಕ್ಯೂಲೆಕ್ಸ್ ಸೊಳ್ಳೆಗಳ ಕಡಿತದಿಂದ ಹಂದಿಯ ಶರೀರವನ್ನು ಪ್ರವೇಶಿಸಿ ವೃದ್ಧಿಯಾಗುತ್ತದೆ. ಪುನಃ ಸೊಳ್ಳೆಗಳ ಕಡಿತದ ಮೂಲಕ ಹಂದಿಯಿಂದ ಸುಮಾರು 1 ರಿಂದ 12 ವರ್ಷ ವಯಸ್ಸಿನ ಮಕ್ಕಳಲ್ಲಿ ಈ ರೋಗದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ.

1) ರೋಗದ ವರದಿಯಾದ ಹಳ್ಳಿಗಳಲ್ಲಿ ಆರೋಗ್ಯ ಕಾರ್ಯಕರ್ತರು ತೀವ್ರವಾಗಿ ಮನೆ ಮನೆಗೆ ಭೇಟಿ ಕೊಟ್ಟು ರೋಗದ ಪ್ರಕರಣಗಳನ್ನು ಗುರುತಿಸಿ ಅವರನ್ನು ಚಿಕಿತ್ಸೆಗಾಗಿ ಹಿರಿಯ ಆಸ್ಪತ್ರೆಗಳಿಗೆ ಕಳುಹಿಸಿ ಕೊಡಲಾಗುತ್ತಿದೆ.

2) ಮಂಡ್ಯ, ಕೋಲಾರ, ಬಳ್ಳಾರಿ ಈ ಆಸ್ಪತ್ರೆಗಳಲ್ಲಿ ರೋಗಿಗಳಿಗಾಗಿ ಪ್ರತ್ಯೇಕ ವಾರ್ಡುಗಳನ್ನು ತೆರೆಯಲಾಗಿದೆ. ಹಾಗೂ ರೋಗದ ಪ್ರಕರಣಗಳನ್ನು ಚಿಕಿತ್ಸೆಗೆ ಒಳಪಡಿಸಲು ನುರಿತ ವೈದ್ಯರನ್ನು ಒದಗಿಸಲಾಗಿದೆ. ಈ ಆಸ್ಪತ್ರೆಗಳಿಗೆ ಔಷಧಿ ಪೂರೈಕೆಯನ್ನು ಸರ್ಕಾರದ ಔಷಧಿ ಮಳಿಗೆಯಿಂದ ಅವಶ್ಯಕತೆಯ ಮೇರೆಗೆ ಸರಬರಾಜು ಮಾಡಲಾಗಿರುತ್ತದೆ. ಈಗಾಗಲೇ ಮಂಡ್ಯ. ಕೋಲಾರ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಕೆಳಕಂಡ ಮೊತ್ತಕ್ಕೆ ಸಮವಾಗಿ ಔಷಧಿಗಳನ್ನು ಸರ್ಕಾರದ ಔಷಧಿ ಮಳಿಗೆಯ ಮೂಲಕ ಬಿಡುಗಡೆ ಮಾಡಲಾಗಿದೆ.

ಜಿಲ್ಲೆಗಳು	ಒದಗಿಸಲಾದ ಹಣದ ಮೊತ್ತ
1) ಬಳ್ಳಾರಿ ಜಿಲ್ಲೆಗೆ	40.000–00
2) ಕೋಲಾರ ಜಿಲ್ಲೆಗೆ	42,000–00
3) ಮಂಡ್ಯ ಜಿಲ್ಲೆಗೆ	25.000–00
ಒಟ್ಟು :	1.07.000–00

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ತಮ್ಮ ಜಿಲ್ಲೆಗಳ ರೋಗ ಪೀಡಿತ ಪ್ರದೇಶಗಳ ಆಸ್ಪತ್ರೆಗಳಿಗೆ ತುರ್ತು ಚಿಕಿತ್ಸೆಗಳಿಗೆಗಾಗಿ ಅವಶ್ಯಕವಿರುವ ಔಷಧಿಗಳನ್ನು ಸರಬರಾಜು ಮಾಡಲಾಗಿದೆ.

ರೋಗ ಪ್ರತಿಬಂಧಕ ಕ್ರಮಗಳಿಗೆ ಜಿಲ್ಲಾ ಪರಿಷತ್ತಿನ ವಾರ್ಷಿಕ ಯೋಜನೆಯಲ್ಲಿ ಬಳ್ಳಾರಿ ಜಿಲ್ಲೆಗೆ 2 ಲಕ್ಷ ರೂ. ಗಳನ್ನು ಕೋಲಾರ ಜಿಲ್ಲೆಗೆ 1.0 ಲಕ್ಷ ರೂ. ಗಳನ್ನು ತುಮಕೂರು ಜಿಲ್ಲೆಗೆ 0.50 ಲಕ್ಷ ರೂ. ಗಳನ್ನು ಒದಗಿಸಲಾಗಿದೆ. ಬಿಜಾಪುರ ಜಿಲ್ಲೆಗೆ 2.25 ಲಕ್ಷ ರೂ. ಗಳನ್ನು ಚಿತ್ರದುರ್ಗ ಜಿಲ್ಲೆಗೆ 1.0 ಲಕ್ಷ ರೂ. ಗಳನ್ನು ಸಹ ಬಿಡುಗಡೆ ಮಾಡಲಾಗಿದೆ.

ರೋಗಾಣುಗ್ರಸ್ಥ ಸೊಳ್ಳೆಗಳ ಸಾಂದ್ರತೆಯನ್ನು ಕಡಿಮೆ ಮಾಡಲು ಕೀಟ ನಾಶಕಗಳ ಸಿಂಪರಣೆಯನ್ನು ವ್ಯಾಪಕವಾಗಿ ರೋಗ ಪೀಡಿತ ಹಳ್ಳಿಗಳಲ್ಲಿ ಮಾಡಲಾಗಿರುತ್ತದೆ.

ಮಲೇರಿಯಾ ವಿಭಾಗದ ಉಪ ನಿರ್ದೇಶಕರು ಹಾಗೂ ಕೀಟ ಶಾಸ್ತ್ರಜ್ಞರು ರೋಗವನ್ನು ಹರಡುವ ಕೀಟಗಳ ಬಗ್ಗೆ ವಿಶೇಷ ಅಧ್ಯಯನ ನಡೆಸಲು ಆದೇಶಿಸಲಾಗಿದೆ.

ಕೀಟ ನಾಶಕ ಸಿಂಪರಣೆಗಾಗಿ ಜಿಲ್ಲಾವಾರು ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ವಿವರಗಳು ಹೀಗಿವೆ :

ಜಿಲ್ಲೆಗಳು	ಬಿಡುಗಡೆ ಮಾಡಿದ ಮೊತ್ತ
1) ಮಂಡ್ಯ	2.90.000–00
2) ಬಳ್ಳಾರಿ	1.18,000–00
3) ಕೋಲಾರ	49,000–00

ಆರು ಪಾರಗಳ ನಂತರ ಕೀಟನಾಶಕಗಳನ್ನು ಪುನಃ ಸಿಂಪಡಿಸಲು ಸೂಚನೆ ಕೊಡಲಾಗಿದೆ. ರೋಗಗಳನ್ನು ಪತ್ತೆ ಹಚ್ಚಲು ಶಂಕೆ ಪೀಡಿತ ರೋಗಿಗಳಿಂದ ರಕ್ತದ ಮಾದರಿಗಳನ್ನು ತೆಗೆದು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿರುವ ನಿಮ್. ಪಿ. ವಿ. ವಿಶೇಷ ಪ್ರಯೋಗಾಲಯಕ್ಕೆ ಕಳುಹಿಸಿ ಕೊಡಲಾಗುತ್ತಿದೆ.

ರೋಗವನ್ನು ಪ್ರತಿಬಂಧಿಸಲು ಹಿಮಾಚಲ ಪ್ರದೇಶದ ಕನಾಲಿಯ ಕೇಂದ್ರೀಯ ಲಸಿಕೆ ಸಂಸ್ಥೆಯಿಂದ 50,000 ಡೋಸ್‌ಗಳಷ್ಟು ಲಸಿಕೆಯನ್ನು ಆಮದು ಮಾಡಿಕೊಂಡು ಮಂಡ್ಯ, ಕೋಲಾರ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ತಲಾ 10,000 ಡೋಸ್‌ಗಳನ್ನು ಸರಬರಾಜು ಮಾಡಲಾಗಿದೆ. ಈಗಾಗಲೇ ಲಸಿಕೆ ಹಾಕುವ ಕಾರ್ಯಕ್ರಮ ಪ್ರಾರಂಭವಾಗಿದೆ.

ಇನ್ನೂ 50,000 ಸಹಸ್ರ ಡೋಸ್‌ಗಳನ್ನು ಸರಬರಾಜು ಮಾಡಲು ವಿಶೇಷ ಬೇಡಿಕೆಯನ್ನು ಕನಾಲಿಯ ಲಸಿಕೆ ಸಂಸ್ಥೆಗೆ ಸಲ್ಲಿಸಲಾಗಿದೆ.

ಜನ ಸಂಪರ್ಕದಿಂದ ಹಂದಿಗಳನ್ನು 2 ಕಿ. ಮೀ. ದೂರದಲ್ಲಿ ಇರಿಸುವಂತೆ ತಾಲ್ಲೂಕು ಮತ್ತು ಜಿಲ್ಲಾ ದಂಡಾಧಿಕಾರಿಗಳಿಗೆ ಮನವಿ ಮಾಡಲಾಗಿದೆ.

ಕೀಟಗಳ ಸಾಂದ್ರತೆಯನ್ನು ಸಮಗ್ರವಾಗಿ ಕಡಿಮೆ ಮಾಡುವ ಯೋಜನೆಗಳನ್ನು ಕೂಡ ಆಳವಡಿಸಲಾಗುತ್ತಿದೆ. ಸೊಳ್ಳೆಗಳು ಉತ್ಪತ್ತಿಯಾಗದಂತೆ ನಿರುಪಯುಕ್ತ ನೀರಿನ ಸಂಗ್ರಹವನ್ನು ಕಡಿಮೆ ಮಾಡುವ ಕ್ರಮಗಳನ್ನು ಮತ್ತು ಸೊಳ್ಳೆ ಮರಿಗಳನ್ನು ವ್ಯಾಪಕವಾಗಿ ಸ್ವೀಕರಿಸುವ ಮೀನುಗಳನ್ನು ನೀರಿನ ಜಲಾಶಯಗಳಲ್ಲಿ ಬಿಡಲಾಗುತ್ತಿದೆ. ಸೊಳ್ಳೆಗಳಿಂದ ರಕ್ಷಣೆ ಪಡೆಯುವ ಆರೋಗ್ಯ ತಿಳುವಳಿಕೆ ಕಾರ್ಯಕ್ರಮಗಳನ್ನು ಚಿತ್ರ ಪತ್ರಿಕೆ ಮೂಲಕ ಹಾಗೂ ಇತರ ಪ್ರಚಾರ ಸ್ಥಾನಗಳ ಮೂಲಕ ಪ್ರಚಾರ ಪಡಿಸಲಾಗುತ್ತಿದೆ.

ಇದೇ ತಿಂಗಳ 12-13 ತಾರೀಖಿನಂದು ರಾಜ್ಯದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಹಾಗೂ ವಿಭಾಗೀಯ ಸಹ ನಿರ್ದೇಶಕರುಗಳ ವಿಶೇಷ ಸಭೆಯನ್ನು ಏರ್ಪಡಿಸಿದ್ದು ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಚರ್ಚಿಸಲಾಗಿದೆ.

ರಾಜ್ಯದಲ್ಲಿ ಮೆದುಳು ಜ್ವರದ ಪರ್ಸಂಪ್ರತಿಯ ವಿವರಗಳು

ಸಾಲು	ಪ್ರಕರಣಗಳು	ಮರಣಗಳು
1981	837	236
1982	150	52
1983	410	112
1984	81	30
1985	138	57
1986	635	135
1987	132	43
1988	61	27
1989	69	18
1990 (ಈವರೆಗೆ 13-12-90ರವರೆಗೆ)	92	23 (ಆಂಧ್ರಪ್ರದೇಶದಿಂದ 9ಪ್ರಕರಣಗಳು)

ಶ್ರೀ ಎಂ. ವಿ. ವೆಂಕಟಪ್ಪ:– ಮಾನ್ಯ ಉಪಾಧ್ಯಕ್ಷಿಣಿಯವರೇ, 10 ವರ್ಷಗಳ ಅವಧಿಯಲ್ಲಿ 600 ಜನರು ಈ ಕಾಯಿಲೆಯಿಂದ ಸತ್ತಿದ್ದಾರೆ. ಆದ್ದರಿಂದ ಹಳ್ಳಿಗಾಡಿನಲ್ಲಿ ಗ್ರಾಮ ನೈರ್ಮಲ್ಯ ಕಾರ್ಯಕ್ರಮಗಳನ್ನು ಕೈಗೊಂಡು ಈ ಖಾಯಿಲೆ ಹರಡುವುದಕ್ಕೆ ಕಾರಣವಾಗಿರುವಂಥ ಹಂದಿ ಮುಂತಾದ ಪ್ರಾಣಿಗಳನ್ನು ಹಳ್ಳಿಗಾಡಿನ ಜನರಿಂದ ದೂರವಿರಿಸಿ ನೈರ್ಮಲ್ಯೀಕರಣ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಸಾಮಾನ್ಯವಾಗಿ ನಮ್ಮ ಮುಳುಬಾಗಿಲು ತಾಲೂಕಿನಲ್ಲಿ ಪ್ರತಿ 2 ವರ್ಷಕ್ಕೊಮ್ಮೆ ಈ ಖಾಯಿಲೆ ಕಂಡುಬರುತ್ತಿದೆ. ಆದ್ದರಿಂದ ಇದಕ್ಕೆ ಕಾರಣವಾದ ಹಂದಿ ಮುಂತಾದ ಪ್ರಾಣಿಗಳನ್ನು ಊರಿನಿಂದ ಕನಿಷ್ಠ ಸುಮಾರು ಅರ್ಧ ಕಿಲೋಮೀಟರ್ ಆದರೂ ದೂರವಿರುವಂತೆ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ :– ಮಾನ್ಯ ಉಪಾಧ್ಯಕ್ಷಿಣಿಯವರೇ, ಸದನದಲ್ಲಿ ಧರಣಿ ನಡೆಯುತ್ತಿರುವಾಗ ನಾವು ಇಲ್ಲಿ ಸಭೆಯನ್ನು ನಡೆಸುವುದು ಸರಿಯಲ್ಲ. ಇದು ಒಂದು ಕೆಟ್ಟ ಸಂಪ್ರದಾಯ ಆಗುತ್ತದೆ. ಆದ್ದರಿಂದ ನಾನು

ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ; ಈ ಸಭೆಯನ್ನು ದಯವಿಟ್ಟು 5–10 ನಿಮಿಷಗಳ ಕಾಲ ಅಡ್ಜರ್ನ್ ಮಾಡಿ. ತಮ್ಮ ಛೇಂಬರ್‌ನಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು, ಸಭಾ ನಾಯಕರು, ಇನ್ನೂ ಬೇರೆ ಬೇರೆ ಪಕ್ಷಗಳ ಮುಖಂಡರನ್ನು ಕರೆಯಿಸಿಕೊಂಡು ಚರ್ಚೆ ಮಾಡಿ. ಆದರೆ ಇಲ್ಲಿ ಧರಣಿಯನ್ನು ಕೂಡಿಸಿಕೊಂಡು ನಾವು ಸಭೆಯನ್ನು ನಡೆಸುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲ.

(ಗೊಂದಲ)

ಉಪಾಧ್ಯಕ್ಷಿಣಿಯವರು :– ಆದರ ಬಗ್ಗೆ ಈಗಾಗಲೇ ರೂಲಿಂಗ್ ಕೊಟ್ಟಿರುತ್ತೇನೆ. I stand by that Ruling ಆದರಂತೆ ಸಭೆಯನ್ನು ನಡೆಸಲಾಗುತ್ತಿದೆ. ನಾವು ಕೂಡ ಅವರನ್ನು ರಿಕ್ವೆಸ್ಟ್ ಮಾಡಿಕೊಂಡಿದ್ದಾಯಿತು. ನೀವು ಕೂಡ ರಿಕ್ವೆಸ್ಟ್ ಮಾಡಿಕೊಂಡಿರುತ್ತೀರಿ. ದಯವಿಟ್ಟು ಅವರು ತಮ್ಮ ಸ್ಥಾನಗಳಲ್ಲಿ ಬಂದು ಕುಳಿತುಕೊಳ್ಳಲೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಮಿತ್ರ ಸದಸ್ಯರು ಧರಣಿ ಕುಳಿತು ಕೊಂಡಿರುವಾಗ ನಾನು ವಿರೋಧ ಪಕ್ಷದ ಸದಸ್ಯನಾಗಿ ನಾನು ನೋಡಿಕೊಂಡು ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ನಾನು ಕೂಡ ಹೊರಗೆ ಹೋಗುತ್ತೇನೆ.

ಉಪಾಧ್ಯಕ್ಷಿಣಿಯವರು :– ಮಾನ್ಯ ಸದಸ್ಯರನ್ನು ಎಲ್ಲರೂ ಕೂಡ ಕೇಳಿಕೊಂಡಿರುತ್ತಾರೆ, ಈ ಕಡೆಯವರು ಕೇಳಿಕೊಂಡಿರುತ್ತಾರೆ, ಆ ಕಡೆಯವರು ಕೇಳಿಕೊಂಡಿರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷಿಣಿಯವರೇ ಇದು ಸರಿಯಾದ ರೀತಿಯಲ್ಲ. ಅಧ್ಯಕ್ಷರೇ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದಿಷ್ಟೆ. ದಯವಿಟ್ಟು ಸಭೆಯನ್ನು ಹತ್ತು ನಿಮಿಷಗಳ ಕಾಲ ಮುಂದಕ್ಕೆ ಹಾಕಿ ಅವರನ್ನು ಕರೆಯಿಸಿ ಮಾತುಕತೆ ನಡೆಸಿ ಒಂದು ತೀರ್ಮಾನಕ್ಕೆ ಬನ್ನಿ. ಈ ರೀತಿ ತಾವು ಅವರು ಧರಣಿ ಕುಳಿತಿರುವಾಗ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗುತ್ತಿರುವುದು ಪ್ರಜಾಪ್ರಭುತ್ವದಲ್ಲಿ ಇದು ಒಳ್ಳೆಯ ಸಂಪ್ರದಾಯವಲ್ಲ. ಯಾರೋ ನಾಲ್ಕು ಜನ ಸದಸ್ಯರು ಕುಳಿತಿದ್ದಾರೆ ನಮ್ಮ ಪಾಡಿಗೆ ನಾವು ಸಭೆಯನ್ನು ನಡೆಸಿಕೊಂಡು ಹೋಗೋಣವೆನ್ನತಕ್ಕಂಥದ್ದು ಒಳ್ಳೆಯ ಸಂಪ್ರದಾಯವಲ್ಲವೆಂದು ಹೇಳುತ್ತೇನೆ.

ಉಪಾಧ್ಯಕ್ಷಿಣಿಯವರು :– ಪ್ರತಿಯೊಂದಕ್ಕೂ ಮಾನ್ಯ ಸದಸ್ಯರು ಈ ರೀತಿ ಧರಣಿ ಕುಳಿತುಕೊಳ್ಳುವುದು ಒಳ್ಳೆಯ ಸಂಪ್ರದಾಯವೆಂದು ಹೇಳುತ್ತೀರಾ ? ಮಾನ್ಯ ಸದಸ್ಯರು ಯಾವ ಕಾರಣಕ್ಕಾಗಿ ಧರಣಿ ಕುಳಿತಿರುವರೋ ಆದರ ಬಗ್ಗೆ ಚರ್ಚೆಯಾಗಿ ಮಾನ್ಯ ಮುಖ್ಯ ಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆ. ಈ ಕಡೆಯವರು ಕೇಳಿರುವುದಕ್ಕೂ ಮತ್ತು ಆ ಕಡೆಯವರು ಕೇಳಿರುವುದಕ್ಕೂ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಈಗಲೂ ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತೇನೆ, ಅವರ ಸ್ಥಾನಕ್ಕೆ ಬಂದು ಕುಳಿತುಕೊಂಡು ಸಭೆಯ ಕಾರ್ಯಕ್ರಮ ನಡೆಸಲು ಅನುಕೂಲಮಾಡಿಕೊಟ್ಟರೆ ಅವರಿಗೆ ಅಭಿನಂದನೆ ಮಾಡುತ್ತೇನೆ.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– ನೀವು ಆ ಕಡೆ ಕುಳಿತಿರುತ್ತೀರಿ. ನೀವೂ ಕೂಡ ಈ ಕಡೆ ಬಂದು ಕುಳಿತಿದ್ದರೆ ಏನಾಗುತ್ತಿತ್ತು, ಎನ್ನುವುದನ್ನು ವಿಚಾರಮಾಡಿ. ನೀವು ಈ ಕಡೆ ಕುಳಿತಿದ್ದರೆ ನಿಮ್ಮ ಪರಿಸ್ಥಿತಿ ಇದೇ ಆಗುತ್ತಿತ್ತು.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷಿಣಿಯವರೆ, ದಯವಿಟ್ಟು ಹತ್ತು ನಿಮಿಷ ಸಭೆಯನ್ನು ಮುಂದಕ್ಕೆ ಹಾಕಿ ಧರಣಿ ಕುಳಿತಿರುವ ಮಾನ್ಯ ಸದಸ್ಯರನ್ನು ಕರೆಯಿಸಿ ಮಾತುಕತೆ ನಡೆಸಿದರೆ ಒಳ್ಳೆಯದೆಂದು ಹೇಳುತ್ತೇನೆ.

(ಗೊಂದಲ)

ಉಪಾಧ್ಯಕ್ಷಿಣಿಯವರು :– ಈಗಾಗಲೇ ಒಂದು ರೂಲಿಂಗ್ ಕೊಟ್ಟಿದೆ. ಅವರು ಅದಕ್ಕೆ ಗೌರವವನ್ನು ಕೊಡಬೇಕು. ಅವರು ತಮ್ಮ ಸ್ಥಾನಕ್ಕೆ ಬಂದು ಕುಳಿತುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ನಾನು ತಮ್ಮ ತೀರ್ಪಿಗೆ ಗೌರವವನ್ನು ಸಲ್ಲಿಸುತ್ತೇನೆ. ತಾವು ಅವರ ಬಗ್ಗೆ ಸೌಜನ್ಯಕ್ಕಾದರೂ ಸಭೆಯನ್ನು ಮುಂದಕ್ಕೆ ಹಾಕಿ ಅವರೊಂದಿಗೆ ಮಾತುಕತೆಗೆ ಅವಕಾಶವನ್ನು ಮಾಡಿಕೊಡಿ.

ಶ್ರೀ ಆರ್. ವಿ. ದೇಶಪಾಂಡೆ :– ಅವರು ರೈತರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ರೈತರಿಗೆ ಕರ್ನಾರದವರು ಹಣವನ್ನು ಬಿಡುಗಡೆ ಮಾಡಿದ್ದಾರೆ. ಬಿಡುಗಡೆ ಮಾಡಿದ್ದರೂ ಸಮಸ್ಯೆಯನ್ನು ಬಗೆಹರಿಸಿಲ್ಲ.

ಅವರು ಸಮಸ್ಯೆಗೆ ವಿರುದ್ಧವಾಗಿಲ್ಲ. ಒಂದು ತಿಳಿವಾತಾವರಣವನ್ನು ಉಂಟು ಮಾಡಲು ಅವರನ್ನು ಕರೆಯಿಸಿ ಮಾತನಾಡಿದರೆ ತೊಂದರೆಯೇನೂ ಆಗುವುದಿಲ್ಲ. ಅವರು ರೈತರ ಪ್ರತಿನಿಧಿಗಳಾಗಿ ಕುಳಿತಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರನ್ನು ತಮ್ಮ ಛೇಂಬರ್‌ಗೆ ಕರೆಯಿಸಿ ಡಿಸ್‌ಕಸ್ ಮಾಡಿದರೆ ಒಳ್ಳೆಯದು. ಮಾನ್ಯ ಮುಖ್ಯಮಂತ್ರಿಗಳು ಸಮಸ್ಯೆಯ ಬಗ್ಗೆ ಸಮಾಧಾನ ಮಾಡಿದರೆ ಒಳ್ಳೆಯದು. ರೈತರ ಪರವಾಗಿ ಸಮಸ್ಯೆಯನ್ನು ಅವರು ಎತ್ತಿದ್ದಾರೆ. ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವುದು ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ತಾವು ಏನೂ ಹೇಳಲಿಲ್ಲ.

ಉಪಾಧ್ಯಕ್ಷಿಣಿಯವರು :– ನಾನು ಹೇಳುವುದು ಹೇಳಿದ್ದೇನೆ. ಸಭೆಯಲ್ಲಿ ತಾವು ಸಹ ರಿಕ್ವೆಸ್ಟ್ ಮಾಡಿಕೊಂಡಿರಿ. ಡೆಪ್ಯೂಟಿ ಲೀಡರ್ ರಿಕ್ವೆಸ್ಟ್ ಮಾಡಿಕೊಂಡಿದ್ದಾರೆ. ಈ ಕಡೆಯಿಂದಲೂ ರಿಕ್ವೆಸ್ಟ್ ಮಾಡಿಕೊಂಡಿದ್ದಾಗಿದೆ. ಸಭೆಯನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಎಲ್ಲರೂ ಕೇಳಿಕೊಂಡಿದ್ದು ಆಗಿದೆ.

ಶ್ರೀ ವಾಟಾಳ್ ನಾಗರಾಜ್ :– ಅನೇಕ ಸಾರಿ ಇಂಥ ಪ್ರಸಂಗಗಳು ಬಂದಾಗ ತಮ್ಮ ಕಾರ್ಯಾಲಯಕ್ಕೆ ಕರೆದು ಮಾತನಾಡಿರತಕ್ಕ ನಿದರ್ಶನಗಳು ಬೇಕಾದಷ್ಟು ಇವೆ. ಐದು ನಿಮಿಷ ಸಭೆಯನ್ನು ಮುಂದಕ್ಕೆ ಹಾಕಿ ಮಾತುಕತೆ ಆಡಿ ಒಂದು ತೀರ್ಮಾನಕ್ಕೆ ಬರಬಹುದು. ರೈತರ ಬಗ್ಗೆ ನಾವೆಲ್ಲರೂ ಒಂದೇ ತೀರ್ಮಾನಕ್ಕೆ ಬಂದಿದ್ದೇವೆ. ಎಲ್ಲರೂ ಒಮ್ಮತದಿಂದಿದ್ದೇವೆ. ಸಭೆಯಲ್ಲೂ ಒಮ್ಮತದ ತೀರ್ಮಾನವಾಗುತ್ತದೆಂದು ಅಂದುಕೊಂಡಿದ್ದೇವೆ. ತಮ್ಮ ನಾಯಕತ್ವದಲ್ಲಿ ಒಂದು ತೀರ್ಮಾನವಾಗಲಿ ಎಂದು ಮನವಿ ಮಾಡಿಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು :– ಧರಣಿ ಕುಳಿತುಕೊಳ್ಳುವುದು ಒಳ್ಳೆಯ ಸಂಪ್ರದಾಯವಲ್ಲ.

ಶ್ರೀ ಬಿ. ಎಚ್. ಬನ್ನಿಕೋಡು :– ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಮಾತು ಸಮಾಧಾನವಾಗಿಲ್ಲ. ತಾವು ತಮ್ಮ ಛೇಂಬರ್‌ನಲ್ಲಿ ಕರೆದು ಮಾತನಾಡಬೇಕು. ಐದು ನಿಮಿಷ ಸಭೆಯನ್ನು ಮುಂದಕ್ಕೆ ಹಾಕಿ ಈ ದಿಸೆಯಲ್ಲಿ ತಾವು ದಯವಿಟ್ಟು ದೊಡ್ಡ ಮನಸ್ಸು ಮಾಡಬೇಕು. ಧರಣಿ ಕುಳಿತಾಗ ಈ ರೀತಿ ಸಭೆಯನ್ನು ನಡೆಸಿಕೊಂಡು ಹೋಗುವುದು ಸರಿಯಲ್ಲ. ಅಧ್ಯಕ್ಷಣಿಯವರು ಸಭೆಯನ್ನು ಮುಂದಕ್ಕೆ ಹಾಕಬೇಕು.

ಡಾ॥ ಎಸ್. ಬಿ. ನಂಜಪ್ಪ :– ಈ ರೀತಿ ಪದೇ ಪದೇ ಧರಣಿ ಕುಳಿತುಕೊಳ್ಳುವುದು ಒಳ್ಳೆಯದಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :– ಮಾನ್ಯ ವೆಂಕಟಪ್ಪನವರು ಕೇಳಿರುವುದಕ್ಕೆ ಉತ್ತರ ಹೇಳಿಬಿಡುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಸಾವಿರ ಸಾರಿ ಮನವಿ ಮಾಡಿದ್ದು ವಿಫಲವಾಯಿತು. ಧರಣಿ ನಡೆಯುತ್ತಿರುವಾಗ ಸಭೆಯನ್ನು ನಡೆಸುತ್ತಿರುವುದು ನನಗೆ ಒಪ್ಪಿಗೆ ಇಲ್ಲ. ಬಹಳ ನೋವಿನಿಂದ, ವೇದನೆಯಿಂದ ನಾನು ಸಭೆಯಿಂದ ಹೊರಗೆ ಹೋಗುತ್ತಿದ್ದೇನೆ. ಇದು ಸರಿಯಲ್ಲ, ನೀವು ಏನು ಬೇಕಾದರೂ ಮಾಡಿಕೊಳ್ಳಿ.

(ಮಾನ್ಯ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು.)

(ಗೊಂದಲ)

ಶ್ರೀಮತಿ ಕೆ, ಎಸ್. ನಾಗರತ್ನಮ್ಮ :– ವೆಂಕಟಪ್ಪನವರು ಹಂದಿಗಳನ್ನು ಬೇರೆ ಕಡೆ ಇರಿಸಬೇಕೆಂದರು.

ಶ್ರೀ ಎಲ್. ಆರ್. ಶಿವರಾಮೇಗೌಡ :– ನಾವು ಕೇಳುತ್ತೇವೆ, ನಾವು ಕೇಳಿದ ಮೇಲೆ ಉತ್ತರ ಹೇಳಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :– ಒಂದು ಪ್ರಶ್ನೆಗೆ ಉತ್ತರ ಆದ ಮೇಲೆ, ಆದನ್ನು ಬಿಟ್ಟು ಬೇರೆ ಏನಾದರೂ ಇದ್ದರೆ ಕೇಳಿ.

ಉಪಾಧ್ಯಕ್ಷಿಣಿಯವರು :– ಶಿವರಾಮೇಗೌಡರೆ, ನಿಮಗೂ ಅವಕಾಶ ಕೊಡುತ್ತೇನೆ, ಕುಳಿತುಕೊಳ್ಳಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :– ಹಂದಿಗಳನ್ನು ಬೇರೆ ಕಡೆ ಇರಿಸಬಾರದೆ ಎಂದು ಕೇಳಿದರು. ಆ ಬಗ್ಗೆ ವಿಚಾರಿಸಿದಾಗ ರೈತರು ಏನು ಹೇಳಿದರೆಂದರೆ, ಸರ್ಕಾರದವರು ಸಾಲ ಕೊಡುತ್ತಾರೆ, ಬ್ಯಾಂಕಿನವರು ಸಾಲ ಕೊಡುತ್ತಾರೆ, ನಾವು ಹಂದಿಗಳನ್ನು ಸಾಕುತ್ತೇವೆ. ಬೇಕಾದಲ್ಲಿ ಇರಿಸುತ್ತೇವೆ. ಆ ಬಗ್ಗೆ ನೀವು ಯಾರು ಕೇಳುವುದಕ್ಕೆ ಎಂದು ಅಧಿಕಾರಿಗಳಿಗೆ ಒರಟಾಗಿ ಹೇಳುತ್ತಾರೆ. ಇದಕ್ಕೆ ಎಲ್ಲರ ಸಹಕಾರ ಬೇಕು. ಮಕ್ಕಳಿಗೆ ಜ್ವರ ಬಂದು ಇದ್ದಕ್ಕಿದ್ದ ಹಾಗೆ ಮರಣ ಹೊಂದುವದು ನೋಡಿದರೆ ಬಹಳ ದುಃಖವಾಗುತ್ತದೆ. ಆದರೆ ಇವರು ಸರ್ಕಾರ ಸಹಾಯ ಮಾಡಿದೆ ಹಂದಿ ತೆಗೆದುಕೊಂಡಿದ್ದೇವೆ, ನಾವು ಮನೆಯಲ್ಲೇ ಇಟ್ಟುಕೊಳ್ಳುತ್ತೇವೆಂದು ಜವಾಬು ಕೊಟ್ಟರೆ ಅಧಿಕಾರಿಗಳು ಕೆಲಸ ಮಾಡುವುದು ಕಷ್ಟವಾಗುತ್ತದೆ. ಈ ದಿಸೆಯಲ್ಲಿ ಎಲ್ಲರ ಸಹಕಾರ ಇದ್ದರೆ ಹಂದಿಗಳನ್ನು ಬೇರೆ ಇರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಎಸ್. ಆತ್ಮಾನಂದ :– ಇದೇ ಪ್ರಥಮ ಅಲ್ಲ. ಪ್ರತಿವರ್ಷ ಮಿದುಳು ಜ್ವರದಿಂದ ಸಾವುಗಳು ಆಗುತ್ತಿವೆ. ಈ ದಿಸೆಯಲ್ಲಿ ಸರ್ಕಾರ ಏನು ಶಾಶ್ವತ ಪರಿಹಾರ ಕ್ರಮಗಳನ್ನು ಕೈಗೊಳ್ಳುತ್ತದೆ ? ರೋಗ ಬಂದಾಗ ಕ್ರಮಗಳನ್ನು ಕೈಗೊಳ್ಳುವುದು ಮುಖ್ಯವಲ್ಲ. ಈ ಬಗ್ಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ಜಿಲ್ಲಾ ಪರಿಷತ್ತುಗಳಿಗೆ ವಾರ್ಷಿಕ ಯೋಜನೆಯಲ್ಲಿ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ :– ಆತ್ಮಾನಂದರು ಹೇಳಿದ ಹಾಗೆ ಮಿದುಳು ಜ್ವರ ಹೊಸದೇನೂ ಅಲ್ಲ. ಮಂಡ್ಯ ಜಿಲ್ಲೆಯಲ್ಲಾಗಲಿ ಅಥವಾ ರಾಜ್ಯದಲ್ಲಿ ಯಾವುದೇ ಜಿಲ್ಲೆಯಲ್ಲಿ ಬರತಕ್ಕದ್ದು ಹೊಸದಲ್ಲ. ಆದರೂ ಸಪ ಪೆಂಕಟಪ್ಪನವರು ಹೇಳಿದಹಾಗೆ ಹಂದಿಗಳನ್ನು ಬೇರೆ ಭಾಗಕ್ಕೆ ಇಡಬೇಕು ಎಂದಾಗ ಅದಕ್ಕೆ ನಮ್ಮ ಸಹಕಾರ ವೂ ಬೇಕು ಎಂದು ಸರ್ಕಾರ ಹೇಳಿದೆ. ಅದು ಸತ್ಯ. ಮಂಡ್ಯ ಜಿಲ್ಲೆಗೆ ಸೀಮಿತವಾಗಿ ಮಾತನಾಡಬೇಕಾದರೆ ಈಗಾ ಗಲೇ 29 ಮಕ್ಕಳನ್ನು ಈ ಖಾಯಿಲೆ ಬಲಿ ತೆಗೆದುಕೊಂಡಿದೆ. ಇಂಥ ಸಂದರ್ಭದಲ್ಲಿ ಹಂದಿಗಳಿಂದಲೇ ಈ ಕಾಯಿಲೆ ಬರುತ್ತದೆಂದು ಆರ್ಥ ಮಾಡಿಕೊಂಡ ಮೇಲೆ ಸ್ಥಳೀಯ ಮುಖಂಡರನ್ನು ಒಗ್ಗೂಡಿಸಿ ಜನರ ಮನಸ್ಸನ್ನು ಪರಿಸು ವಂಥ ಕೆಲಸವನ್ನು ಅಧಿಕಾರಿಗಳು ಮಾಡಿಲ್ಲ. ಸರ್ಕಾರ ಆ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕು. ಮತ್ತು ಈ ರೋಗವನ್ನು ನಿಯಂತ್ರಣ ಮಾಡುವುದಕ್ಕೆ ಕೆನಾಲಿಯಾ ಕೇಂದ್ರೀಯ ಲಸಿಕೆ ಸಂಸ್ಥೆಯಿಂದ ಲಸಿಕೆಗಳನ್ನು ತರಿಸು ತ್ತಾರೆ. ಆ ಲಸಿಕೆಗಳು ನಮ್ಮ ರಾಜ್ಯದಲ್ಲಿ ಸಾಕಷ್ಟಿಲ್ಲ ಎಂದು ನನಗೆ ಬಂದಿರುವ ವರದಿ ಪ್ರಕಾರ ಗೊತ್ತಾಗಿದೆ. ಮಿದುಳು ಜ್ವರ ವ್ಯಾಪಕವಾಗಿ ಬರುವ ಸಂದರ್ಭದಲ್ಲಿ ಸರ್ಕಾರ ಸಾಕಷ್ಟು ಲಸಿಕೆಗಳನ್ನು ಸ್ಟಾಕ್ ಇಟ್ಟುಕೊಂಡು ಆ ಖಾಯಿಲೆ ಬಂದಾಗ ಅದನ್ನು ನಿಯಂತ್ರಣ ಮಾಡುವ ದಿಕ್ಕಿನಲ್ಲಿ ಕೆಲಸ ಮಾಡಬೇಕೆಂದು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ :– ಅಧ್ಯಕ್ಷರೇ, ನಾನೂ ಅದಕ್ಕೆ ಸಹಿ ಮಾಡಿದ್ದೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :– ನಿಮ್ಮ ಸಹಿ ಇಲ್ಲ. ಅಧ್ಯಕ್ಷರೇ, ಆತ್ಮಾನಂದ ಅವರು ಜಿಲ್ಲಾ ಪರಿ-ಷತ್ತಿನಿಂದ ಹಣ ಕೊಡಬೇಕೆಂದು ಹೇಳಿದರು. ಈಗಾಗಲೇ ಹಣ ಬಿಡುಗಡೆ ಮಾಡಲಾಗಿದೆ. ಕೆನಾಲಿ ಸಂಸ್ಥೆ ಯಿಂದ 50 ಸಾವಿರ ವ್ಯಾಕ್ಸಿನ್‌ಗಳನ್ನು ತರಿಸಿದ್ದೇವೆ. ಬಳ್ಳಾರಿಗೆ 10 ಸಾವಿರ, ಕೋಲಾರಕ್ಕೆ 10 ಸಾವಿರ ಮತ್ತು ಮಂಡ್ಯಕ್ಕೆ 10 ಸಾವಿರ ಲಸಿಕೆಗಳನ್ನು ಈಗಾಗಲೇ ಹಂಚಿದ್ದೇವೆ. ಶಿವರಾಮೇಗೌಡರು, ಅಧಿಕಾರಿಗಳು ಏನೂ ಮಾಡಿಲ್ಲ ಎಂದು ಹೇಳಿದರು. ಬಹುಶಃ ಅವರು ನಾನು ಓದಿದ್ದನ್ನು ಕಿವಿಗೆ ಹಾಕಿಕೊಂಡಿಲ್ಲ ಎಂದು ಕಾಣುತ್ತದೆ. ಅಧಿಕಾರಿಗಳು ಭಿತ್ತಿಪತ್ರಗಳನ್ನು ಹಂಚಿದ್ದಾರೆ. ನಾನು ರೇಡಿಯೋ ಮೂಲಕ ಮಾತನಾಡಿದ್ದೇನೆ. ಅಧಿಕಾರಿಗಳು ಮನೆಮನೆಗೆ ಹೋಗಿ ಹೇಳಿದ್ದಾರೆ. ಸೊಳ್ಳೆ, ಹಂದಿ ಮತ್ತು ಮಗು ಇವರಲ್ಲಿ ಒಂದನ್ನು ಬೈಫರ್‌ಕೇಟ್ ಮಾಡಿ ದರೂ ಖಾಯಿಲೆ ಬರುವುದಿಲ್ಲ. ಮಕ್ಕಳು ಎಲ್ಲರ ಸ್ವತ್ತು. ಅವು ಮರಣಕ್ಕೆ ತುತ್ತಾಗುತ್ತಾ ಇರುವುದನ್ನು ನೋಡು ವುದಕ್ಕೆ ಯಾರ ಕೈಯಲ್ಲಿ ಆಗುತ್ತದೆ ? ಅಧಿಕಾರಿಗಳು ಬೇಕಾಬಿಟ್ಟಿ ಕೆಲಸ ಮಾಡಿದ್ದಾರೆ. ಮಾನ್ಯ ಶಿವರಾಮೇ ಗೌಡರು ವಿಚಾರ ತಿಳಿದುಕೊಳ್ಳದೆ ಮಾತನಾಡಿದ್ದಾರೆ. ಈಗಾಗಲೇ ಲಸಿಕೆಗೆ ಆರ್ಡರ್ ಕೊಟ್ಟಿದ್ದೇವೆ. ಅದನ್ನು ತಂದಿಟ್ಟು ರೇಪಿರಣೆ ಮಾಡುವುದಕ್ಕಾಗುವುದಿಲ್ಲ. ಖಾಯಿಲೆ ಬರುತ್ತದೆಯೋ ಬರುವುದಿಲ್ಲವೋ ಯಾವಾಗ ಬರುತ್ತದೆಯೋ ಗೊತ್ತಿರುವುದಿಲ್ಲ. ಆ ವ್ಯಾಕ್ಸಿನ್ ಬಹಳ ಎಕ್ಸ್‌ಪೆನ್‌ಸಿವ್ ಮತ್ತೆ ಆರ್ಡರ್ ಕೊಟ್ಟಿದ್ದೇವೆ. ಆದ್ದರಿಂದ ದಯಮಾಡಿ ಹಾಗೆ ಮಾತನಾಡಬಾರದು. ಅಧಿಕಾರಿಗಳು ಬೇಕಾದಷ್ಟು ಕೆಲಸ ಮಾಡುತ್ತಿದ್ದಾರೆ. ಇನ್ನು ಮುಂದಕ್ಕೂ ಮಾಡುತ್ತಾರೆ.

ಶ್ರೀ ಎಲ್. ಆರ್. ಶಿವರಾಮೇಗೌಡ :– ಸಭಾಧ್ಯಕ್ಷರೇ.....

ಉಪಾಧ್ಯಕ್ಷರು :– ಈಗ 334 ನೇ ನಿಯಮಾವಳಿಯ ಚರ್ಚೆ. ಕೆ. ಎಂ. ಪುಟ್ಟು ಅವರದು ಈಗ.

ಶ್ರೀ ಎಲ್. ಆರ್. ಶಿವರಾಮೇಗೌಡ :– ನಾನು ಕ್ಲಾರಿಫಿಕೇಷನ್ ಕೇಳುತ್ತೇನೆ.

ಉಪಾಧ್ಯಕ್ಷರು :– ಒಂದು ಸಾರಿ ಆಗಿದೆ.

ಶ್ರೀ ಎಲ್. ಆರ್. ಶಿವರಾಮೇಗೌಡ :– ರೋಗ ಬಂದ ಮೇಲೆ ಅಧಿಕಾರಿಗಳು ಕೆಲಸ ಮಾಡಿಲ್ಲ ಎಂದು ನಾನು ಹೇಳಿಲ್ಲ. ಅವರು ಸರಿಯಾಗಿ ನನ್ನ ಮಾತನ್ನು ಅರ್ಥ ಮಾಡಿಕೊಂಡಿಲ್ಲ ಅನ್ನಿಸುತ್ತದೆ. ವರ್ಷ ವರ್ಷ ಈ ಖಾಯಿಲೆ ಬರತಕ್ಕ ಸಂದರ್ಭದಲ್ಲಿ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಏತಕ್ಕೆ ತೆಗೆದುಕೊಂಡಿಲ್ಲ ಎಂದು ಹೇಳಿ ದ್ದೇನೆ. ಮಿದುಳು ಜ್ವರ ಬರುತ್ತದೆ, ನಂತರ ಕ್ರಮ ತೆಗೆದುಕೊಂಡಿದ್ದಾರೆ. ಮಿದುಳು ಜ್ವರ ಬಂದ ಮೇಲೆ ಅಧಿ ಕಾರಿಗಳು ಕ್ರಮ ತೆಗೆದುಕೊಳ್ಳುವುದಲ್ಲ. ಮೊದಲೇ ಕ್ರಮ ತೆಗೆದುಕೊಳ್ಳುವಂತೆ ಆದೇಶ ಕೊಡಬೇಕು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ :– ಒಂದು ಸಾರಿ ರೋಗ ಬರುವುದಿಲ್ಲ. ಏನು ಮಾಡಬೇಕು ಆಗ ? ಹೇಗೆ ಸಾವು ಬರುವುದನ್ನು ಎಕ್ಸ್‌ಪೆಕ್ಟ್ ಮಾಡುವುದಕ್ಕಾಗುವುದಿಲ್ಲವೋ ಹಾಗೆ ರೋಗ ಬರುವುದನ್ನೂ ಎಕ್ಸ್-ಪೆಕ್ಟ್ ಮಾಡುವುದಕ್ಕಾಗುವುದಿಲ್ಲ.